VIJAYAKUMAR KANNUR
Digitally signed by VIJAYAKUMAR KANNUR
Date: 2025.11.26 16:18:22 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 26.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ವಿ ಕೆ ವಕೀಲರಿಂದ :**

ನಾನು ಬಿ.ಬಿ.ಎ ಪದವಿಧರಳಾಗಿರುವೆನು. ಈ ದಾವೆಯಲ್ಲಿ ಹಾಜರು ಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುವುದು. ವಾದಿಯು 3 ಗುಂಟೆಯ ಜಾಗೆ ತನ್ನ ಮಾಲೀಕತ್ವದ ಆಸ್ತಿ ಇರುವುದಾಗಿ ಎಂದು ಹೇಳಿ ಈ ದಾವೆ ದಾಖಲು ಮಾಡಿರುವನು. ಸರ್ವೇ ನಂಬರ್ 199 ಜಮೀನು ಮೂಲತಃ ಹಣಮಂತ ಶೇರಖಾನೆ ಎಂಬುವವರ ಮಾಲೀಕತ್ವದ ಆಸ್ತಿಯಾಗಿರುವುದು. ಇದಕ್ಕೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಹಾಜರು ಪಡಿಸಿರುವೆನು. ಕಂದಾಯ ದಾಖಲೆಗಳನ್ನು ಹಾಜರು ಪಡಿಸಿರುವೆನು. ಈ ದಾಖಲೆಗಳ ಆಧಾರದ ಮೇರೆಗೆ ಈ ಆಸ್ತಿಗೆ ಹಣಮಂತ ಶೇರಖಾನೆ ಇವರು ಮೂಲ ಮಾಲೀಕರು ಅಂತ ಹೇಳುತ್ತಿದ್ದೇನೆ ಎಂದರೆ ಸರಿ.

2. ಸರ್ವೇ ನಂಬರ್ 199 ರ ಆಸ್ತಿಯ ಒಟ್ಟು ವಿಸ್ತೀರ್ಣ ಮೂಲತಃ 2 ಎಕರೆ 30 ಗುಂಟೆಯ ಜಮೀನು ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ಜಮೀನು 1952 ರಲ್ಲಿ ಮೂಲ ಮಾಲೀಕರಾದ ಶಿವಲಿಂಗಪ್ಪ ಮಳಲಿ ಹಾಗೂ ಇತರರು ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೇ ನಂಬರ್ 199 ವಿಸ್ತೀರ್ಣ 2 ಎಕರೆ 30 ಗುಂಟೆಯ ಜಮೀನು ಇದ್ದ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ ಎಂದರೆ ಸರಿ. ಅಸಲು ದಾವಾ ನಂ. 27/1998 ರ ದಾವೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈಗ ಸರ್ವೇ ನಂಬರ್ 199 ರ ಜಮೀನಿನಲ್ಲಿ 34 ಗುಂಟೆಗೆ ಮಾಲೀಕರಾಗಿರುವೆವು. ಈ ಆಸ್ತಿಯನ್ನು ನನ್ನ ಗಂಡನ ತಂದೆ 1990 ರಲ್ಲಿ ವಿಸ್ತೀರ್ಣ 1 ಎಕರೆ 18 ಗುಂಟೆಯ ಜಮೀನನ್ನು ಖರೀದಿ ಮಾಡಿರುವುದರಿಂದ ಈ ಆಸ್ತಿಗೆ ನಾವು ಮಾಲೀಕರಾಗಿರುವೆವು. ಈ ಆಸ್ತಿಯನ್ನು ಹಣಮಂತ ಶೇರಖಾನೆ ಎಂಬುವವರ ಕಡೆಯಿಂದ ಖರೀದಿ ಮಾಡಿರುವರು. ಆ ದಾಖಲೆಯನ್ನು ಈ ದಾವೆಯಲ್ಲಿ ಹಾಜರು

ಪಡಿಸಿರುವೆನು. 1992 ರಲ್ಲಿ 18 ಗುಂಟೆಯ ಜಮೀನನ್ನು ನನ್ನ ಗಂಡನ ತಂದೆ ಸದಾಶಿವ ದಾಸರ ಎಂಬುವವರಿಗೆ ಮಾರಾಟ ಮಾಡಿರುವರು. ಆದ್ದರಿಂದ ಈಗ 34 ಗುಂಟೆ ಜಮೀನು ಮಾತ್ರ ಉಳಿದಿರುವುದು. ಈ ಖರೀದಿ ಮಾಡಿರುವ ಜಮೀನನ್ನು ಹೊರತು ಪಡಿಸಿ ಈ ಸರ್ವೇ ನಂಬರನ ಉಳಿದ ಜಮೀನು ನಮಗೆ ಯಾವುದೇ ರೀತಿಯಾದ ಸಂಬಂಧ ಇರುವುದಿಲ್ಲ. ನಿಪಿ 5 ರ ದಾಖಲೆಯಲ್ಲಿನ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿ ಸರ್ವೇ ನಂಬರ್ 199/2 ವಿಸ್ತೀರ್ಣ 3 ಗುಂಟೆಯ ಜಮೀನಿಗೆ ಮಾಲೀಕನಾಗಿರುವನು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು.

3. ಮಾನ್ಯ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಆದೇಶದ ಮೇರೆಗೆ ರಿ-ಸರ್ವೇ ಮಾಡಿಸಿದ ಬಗ್ಗೆ ಬರೆಸಿರುವೆವು. WP No. 65740/2010 ರ ಅರ್ಜಿಗೆ ಸೋನುಬಾಯಿ ಶೇರಖಾನೆ ಪಕ್ಷಗಾರ ಆಗಿರಲಿಲ್ಲ ಎಂದರೆ ಸರಿ. ವಾದಿ ಸರ್ವೇ ನಂಬರ್ 199/2 ರ 3 ಗುಂಟೆಯ ಜಮೀನಿಗೆ ಮಾತ್ರ ಮಾಲೀಕನಾಗಿರುವನು ಎಂದರೆ ಸರಿಯಲ್ಲ. ಆತ ಈ ಆಸ್ತಿಗೆ ಮಾಲೀಕನಾಗಿರುವನೋ ಅಥವಾ ಇಲ್ಲವೋ ಎಂದು ನನಗೆ ಮಾಹಿತಿ ಇರುವುದಿಲ್ಲ. ಸೋನುಬಾಯಿಯ ಗಂಡ ರುಕ್ಮಾಜಿ ತಿಪ್ಪಾಜಿ ಶೇರಖಾನೆ ಇವರು ದಿಃ 09.08.1952 ರಂದು 60*60 ಫಿಟ್ ಜಾಗೆಯನ್ನು ಮಳಲಿ ಎಂಬುವವರ ಕಡೆಯಿಂದ ಖರೀದಿ ಮಾಡಿರುವರು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಈ ಸಂಗತಿ ನನಗೆ ಗೊತ್ತಿದ್ದರೂ ಸಹಿತ ನಾನು ಉದ್ದೇಶಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಪಿ 3 ರ ದಾಖಲೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ದಾಖಲೆಯ ಪ್ರಕಾರ 3 ಗುಂಟೆಯ ಜಮೀನಿಗೆ ಸೋನುಬಾಯಿ ಮಾಲೀಕಳಾಗಿದ್ದರೂ ಸಹಿತ ಅವಳ ಹಕ್ಕು ನಷ್ಟ ಮಾಡುವ ಸಲುವಾಗಿ ನಾನು ಉದ್ದೇಶಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 16ಎ ದಾಖಲೆಯಲ್ಲಿನ ಸಂಗತಿಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಈ ದಾಖಲೆಗಳ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹಿತ ನಾನು ವಾದಿ ಹಾಜರು ಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.11.26 16:18:28 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ